ಉಪಾಧ್ಯಕ್ಷಣಿಯವರು : ಮುಖ್ಯಮಂತ್ರಿಯವರು ಈಗ ಇಲ್ಲಿ ಇಲ್ಲ...

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರನ್ನು ಕರೆಯಿಸಿ. ಮುಖ್ಯಮಂತ್ರಿಗಳು ಬಂದಮೇಲೆ ಇದಕ್ಕೆ ಉತ್ತರ ಕೊಡಲಿ. ಒಂದು ವೇಳೆ ಇವೊತ್ತು ಇಲ್ಲದಿದ್ದರೆ ಅವರು ಮತ್ತೊಂದು ದಿವಸ ಹೇಳಬಹುದು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಸರಕಾರಕ್ಕೆ ಈ ವಿಷಯದಲ್ಲಿ ಒಟ್ಟಾರೆ ಜವಾಬ್ದಾರಿ ಇದೆ.

ಉಪಾಧ್ಯಕ್ಷಣಿಯವರು : ಈಗ ನಾವು ಮುಂದೆ ಹೋಗೋಣ. ಮುಖ್ಯಮಂತ್ರಿಯವರು ಬಂದ ಮೇಲೆ ಅವರು ಏನು ಹೇಳುತ್ತಾರೋ ಅದನ್ನು ನೋಡೋಣ. ಆದ್ದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರು ದಯಮಾಡಿ ತಮ್ಮ ಆಸನಕ್ಕೆ ಹಿಂದುರುಗಿ ಹೋಗಬೇಕು.

ಶ್ರೀ ಧರ್ಮಸಿಂಗ್ : ತಮ್ಮ ಸಮಸ್ಯೆಗಳಿಗೆ ಉತ್ತರ ಕೊಡಲು ಮುಖ್ಯಮಂತ್ರಿಗಳು ತಯಾರಾಗಿದ್ದಾರೆ. ಮುಖ್ಯಮಂತ್ರಿಗಳು ಬಂದಾಗ ಉತ್ತರ ಕೊಡುತ್ತಾರೆ. ತಾವುಗಳು ದಯಮಾಡಿ ತಮ್ಮ ಆಸನಕ್ಕೆ ಹೋಗಬೇಕು.

ಶ್ರೀ ವಾಟಾಳ್ ನಾಗರಾಜ್ : ಮುಖ್ಯಮಂತ್ರಿಗಳು ಬಂದು ಉತ್ತರಕೊಡುವುದಾದಲ್ಲಿ ನನ್ನ ಅಭ್ಯಂತರವಿಲ್ಲ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಆಸನಕ್ಕೆ ಹಿಂದಿರುಗಿದರು)

ರಾಯಚೂರು ಶಾಖೋತ್ಪನ್ನ ಘಟಕದಲ್ಲಿರುವ ಬೂದಿ ಸಾಗಾಣಿಕೆಯ ಟೆಂಡರ್‌ನಲ್ಲಿ ಅವ್ಯವಹಾರ.

+ಶ್ರೀ ಎಂ. ನಾರಾಯಣ ಸ್ವಾಮಿ : ಮಾನ್ಯ ಸಬಾಧ್ಯಕ್ಷಿಣಿಯವರೇ ಕರ್ನಾಟಕ ರಾಜ್ಯದ ಕೆಇಟಿ ಮತ್ತು ಕೆಪಿಸಿಯಲ್ಲಿ ರಾಯಚೂರು ಶಾಖೋತ್ಪನ್ನ ಘಟಕದಲ್ಲಿನ ಬೂದಿ ಸಾಗಾಣಿಕೆಯ ಟೆಂಡರ್ ಪ್ರಕರಣದಲ್ಲಿ ಸುಮಾರು 14ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ. ಮತ್ತು ತಂತಿ ಪರ್ಚೇಸ್ ವಿಚಾರದಲ್ಲಿಯೂ ಕೂಡ ಸುಮಾರು ಐದು ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ ಎನ್ನುವ ಒಂದು ಸುದ್ದಿ ಇದೆ.

ರಾಯಚೂರು ಶಾಖೋತ್ಪನ್ನ ಘಟಕದ ಬೂದಿ ಸಾಗಾಣಿಕ ಟೆಂಡರ್‌ನಲ್ಲಿ ಮೆಸರ್ಸ್ ಇಂದೂರ್‌ನವರ ಒಂದು ಕಂಪನಿಗೆ ಕಡಿಮೆ ಟೆಂಡರ್‌ನಲ್ಲಿ ಕೊಟ್ಟಿರತಕ್ಕಂತಹ ವಿಚಾರವು ಕೂಡ ತಮ್ಮ ಸದನದ ಹಾಗೂ ಸರ್ಕಾರದ ಗಮನವನ್ನು ಸೆಳೆಯತಕ್ಕಂತಹ ಒಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ಅಕ್ರಮ ವ್ಯವಹಾರದಲ್ಲಿ ಅನೇಕ ಹಿಂದಿನ ಎಂ.ಡಿ.ಯವರು ಆಗಿರಬಹುದು, ಅಥವಾ ಹಿಂದಿನ ಛೇರ್‌ಮನ್ ಆಗಿರಬಹುದು, ಈಗಿನ ಎಂ.ಡಿ. ಯವರು ಕೂಡ ಆಗಿರಬಹುದು. ಅವರ ಹೆಸರುಗಳನ್ನು ಹೇಳಬಾರದು ಎಂದು ತಮ್ಮ ಅಬಿಪ್ರಾಯ ಇರಬಹುದು.

ಉಪಾಧ್ಯಕ್ಷಣಿಯವರು : ಬೇಡ ಹೆಸರು ತಮಗೆ ಗೊತ್ತಿದೆ, ತಿರುಗಿ ಎಕೆ ಅದನ್ನು ಹೇಳುತ್ತೀರಿ?

ಶ್ರೀ ಎಂ. ನಾರಾಯಣ ಸ್ವಾಮಿ : ಅವರು ಅನೇಕ ಅವ್ಯವಹಾರ ಮಾಡಿದ್ದಾರೆ ಎನ್ನುವ ಒಂದು ವಿಚಾರ ಒಂದು ದೊಡ್ಡ ದಿನ ಪತ್ರಿಕೆಯಲ್ಲೂ ಕೂಡ ಬಂದಿದೆ. ಇದರ ಜೊತೆಗೆ ಇನ್ನೂ 2-3 ವಿಷಯಗಳಿವೆ. 14 ಕೋಟಿ ರೂಪಾಯಿಗಳ ವ್ಯವಹಾರ ಹಾಗೂ ತಂತಿ ಖರೀದಿಯ 5 ಕೋಟಿ ರೂಪಾಯಿಗಳ ವ್ಯವಹಾರದಲ್ಲಿ ನಡೆದ ಅಕ್ರಮಗಳನ್ನು ಮುಚ್ಚಿ ಹಾಕಲು ಕೆಪಿಸಿಯ ಮ್ಯಾನೇಜಿಂಗ್ ಡೈರೆಕ್ಟರ್ ಹಾಗೂ ಕೆಇಬಿಯ ಎಕ್ಸ ಛೇರ್‌ಮನ್‌ರವರ ತೆರೆಮರೆಯಲ್ಲಿ ಯತ್ನ ನಡೆಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿಯವರ ಮೇಲೆ ಒತ್ತಡ ತರುವ ಯತ್ನವೂ ನಡೆದಿದೆ. ಈಗ ರಾಯಚೂರು ಶಾಖೋತ್ಪನ್ನ ಘಟಕದಲ್ಲಿ ಬೂದಿ ಸಾಗಾಣಿಕೆ ಟೆಂಡರ್ ಪ್ರಕರಣದಲ್ಲಿ ಎಲ್ ಅಂಡ್ ಟಿ ಕಂಪನಿಗೆ ಕಡಿಮೆ ದರಗಳನ್ನು ನೀಡಿದ್ದರೂ ಅದನ್ನು ಕೈ ತಪ್ಪಿಸಿ ಟೆಂಡರ್ ಪಡೆದ ಮೆಸರ್ಸ್ ಇಂದೂರ್ ಕಂಪನಿಯವರು ದೆಹಲಿಯಲ್ಲಿ ಈ ಕುರಿತು ಕಾರ್ಯಾಚರಣೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ. ಆದ್ದರಿಂದ ಈ ವಿಚಾರವನ್ನು ತಮ್ಮ ಮುಖೇನ ಸದನದ ಹಾಗೂ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ದಯಮಾಡಿ ಇದಕ್ಕೆ ಉತ್ತರವನ್ನು ಕೊಡಬೇಕು.

ಉಪಾಧ್ಯಕ್ಷನೆಯವರು ; ಸರ್ಕಾರದಿಂದ ಏನಾದರೂ ತಾವು ಹೇಳುತ್ತೀರಾ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ಹಿಂದೆ ಈ ಕೆಇಬಿ ಬಗ್ಗೆ ಬಹಳ ಚರ್ಚೆಆಗಿದೆ.

ಶ್ರೀ ಆರ್.ವಿ. ದೇಶಪಾಂಡೆ : ಇದು ಕೆಇಬಿ ಬಗ್ಗೆ ಅಲ್ಲ. ರಾಯಚೂರು ಥರ್ಮಲ್ ಪ್ಲಾಂಟ್‌ನಲ್ಲಿ ಏನು ಬೂದಿ ಇದೆ, ಅದರ ಟ್ರಾನ್ಸ್‌ಪೋರ್ಟೇಷನ್ ವಿಚಾರದಲ್ಲಿ ಎಲ್ ಆಂಡ್ ಟಿ ಕಂಪನಿಯವರದ್ದು ಲೋಯೆಸ್ಟ್ ಟೆಂಡರ್ ಇತ್ತು. ಇದು 14 ಕೋಟಿ ರೂಪಾಯಿಗಳ ವ್ಯವಹಾರ ಇತ್ತು ಆ ಟೆಂಡರನ್ನು ಎಲ್ ಆಂಡ್ ಟಿ ಕಂಪನಿಗೆ ತಪ್ಪಿಸಿ ದೆಹಲಿಯ ಮೆಸರ್ಸ್ ಇಂದೂರ್ ಕಂಪನಿಗೆ ಕೊಟ್ಟಿದ್ದಾರೆ. ಆ ವಿಚಾರದಲ್ಲಿ ಸಾರಷ್ಟು ಭ್ರಷ್ಟಾಚಾರ ಇದೆ ಎಂದು ನಾವು ಆರೋಪ ಮಾಡುತ್ತಿದ್ದೇವೆ. ಎರಡನೆಯದಾಗಿ ಹಿಂದಿನ ಮುಖ್ಯಮಂತ್ರಿಗಳ ಕಾರ್ಯದರ್ಶಿಯವರು ಯಾರು ಇದ್ದರು, ಹೊಸ ಮುಖ್ಯಮಂತ್ರಿ ಆದನಂತರ ಅವರನ್ನು ಪವರ್ ಸೆಕ್ರೆಟರಿಯನ್ನೂ ಕೂಡ ಅಲ್ಲಿಂದ ಟ್ರಾನ್‌ಸಫರ್ ಮಾಡಿದ್ದಾರೆ. ಮುಖ್ಯವಾಗಿ ಕಾರಣ ಅವರೂ ಸಹ ಈ ವ್ಯವಹಾರದಲ್ಲಿ ಇನ್‌ವಾಲ್‌ವ ಆಗಿದ್ದರು ಎನ್ನುವ ಒಂದು ವದಂತಿ ಇದೆ. ಆದ್ದರಿಂದ ಇದರ ಬಗ್ಗೆ ತಾವು ಡಿಟೆಲಾಗಿ ವಿಚಾರ ಮಾಡಿ ಸ್ಟೇಟ್‌ಮೆಂಟ್ ಮಾಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಇದರ ಬಗ್ಗೆ ವಿವರಗಳನ್ನು ತರಿಸಿಕೊಂಡು ಪ್ರತ್ಯೇಕವಾಗಿ ಸ್ಟೇಟ್‌ಮೆಂಟ್ ಕೊಡಲಾಗುತ್ತದೆ.

ಶ್ರೀ ಕೆ. ಹರ್ಷಕುಮಾರ್ ಗೌಡ : ಅಧ್ಯಕ್ಷರೇ, ಇದು ಒಂದು ಪ್ರಮುಖವಾದ ವಿಚಾರ. ಸರ್ವೋಚ್ಚ ನ್ಯಾಯಾಲಯ, ಮೀಸಲಾತಿ ಬಗ್ಗೆ ನಿರ್ಧಾರ ಆಗಬೇಕಾದರೆ ಪರ್‌ಮೆನೆಂಟ್ ಕಮಿಷನಗಳನ್ನು ರಾಜ್ಯಗಳಿಗೆ ಮಾಡಬೇಕು ಮತ್ತು ಆ ಕಮಿಷನ್‌ನವರು 4 ತಿಂಗಳ ಒಳಗಡೆ ವರದಿ ಕೊಡಬೇಕು ಎಂದು ಹೇಳಿ ಆದೇಶ ನೀಡಿದೆ. ಆ ದಿಶೆಯಲ್ಲಿ ರಾಜ್ಯಸರ್ಕಾರ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ? ಯಾವ ಮಟ್ಟದಲ್ಲಿ ಆ ಕಾರ್ಯ ನಡೆದಿದೆ ಎಂದು ತಮ್ಮ ಮೂಲಕ ಸಮಾಜ

ಕಲ್ಯಾಣ ಮಂತ್ರಿಗಳನ್ನು ನಾನು ಕೇಳಬಯಸುತ್ತೇನೆ. ಮಿಸಲಾತಿ ಬಗ್ಗೆ ಕೇಂದ್ರ ಸರ್ಕಾರದಿಂದ ಆದೇಶ ಬಂದಿದೆ. ವಿವಿಧ ರಾಜ್ಯಗಳು ಮಿಸಲಾತಿಯನ್ನು ನಿರ್ಧಾರ ಮಾಡುವುದಕ್ಕೆ ಪರಮನೆಂಟ್ ಕಮಿಷನ್ ಮಾಡಬೇಕು. ಆದರ ಬಗ್ಗೆ ರಾಜ್ಯ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ? ಯಾವಾಗ ವರದಿಯನ್ನು ಕಳುಹಿಸುತ್ತದೆ ಎಂದು ನಾನು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ : ಈಗಾಗಲೇ ಸರ್ಕಾರಕ್ಕೆ ಸುಪ್ರೀ ಕೋರ್ಟ್ ತೀರ್ಪು ಕೂಡ ಬಂದಿದೆ. ನವೆಂಬರ್ 16ರಂದು ತೀರ್ಪು ಆದಮೇಲೆ 24ನೇ ನವೆಂಬರ್‌ಗೆ ರಾಜ್ಯ ಸರ್ಕಾರಕ್ಕೆ ಆದೇಶ ಕಳುಹಿಸಿಕೊಟ್ಟಿದ್ದಾರೆ. ಖಾಯಂ ಆಗಿ ಒಂದು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಕಾನ್‌ಸ್ಟಿಟ್ಯೂಟ್ ಮಾಡಬೇಕು ಎಂದು ಬಂದಿದೆ. ಅದನ್ನು ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಲಾಗಿದೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಏಕೆಂದರೆ ನಾಲ್ಕು ತಿಂಗಳ ಒಳಗಾಗಿ ಆದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಇದೆ ಅದನ್ನು ಕೂಡ ಮಾಡುತ್ತಿದ್ದೇನೆ.ಟಿ

ಬೆಣ್ಣೆತೊರಾ ನೀರಾವರಿ ಯೋಜನೆಯಡಿಯಲ್ಲಿ ಮುಳುಗಡೆಯಾಗುತ್ತಿರುವ ಹಳ್ಳಿಗಳ ಮನೆಗಳ ಪರಿಹಾರ ಧನದಲ್ಲಿ ಕಡಿತ (ಡಿಪ್ರಿಸಿಯೇಷನ್)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) : ಸನ್ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ನೀರಾವರಿ ಯೋಜನೆಗಳ ವಲಯದಲ್ಲಿ ಬರುವ ಬೀದರ್ ಜಿಲ್ಲೆಯ ಕಾರಂಜಾ ನೀರಾವರಿ ಯೋಜನೆ ಮತ್ತು ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಮುಲ್ಲಾಮರಿ ಯೋಜನೆಯಡಿಯಲ್ಲಿ ಮುಳುಗಡೆಯಾಗುವ ಹಳ್ಳಿಗಳ ಮನೆಗಳಿಗೆ ಪರಿಹಾರಧನ ಕೊಡುವಾಗ ಡಿಪ್ರಿಸಿಯೇಷನ್ ಹಣ ಕಡಿತ ಮಾಡದೆ ಕೊಡಬೇಕೆಂದು ಸರ್ಕಾರದ ಆದೇಶವಿದ್ದರೂ ಅದೇ ವಲಯದಲ್ಲಿ ಬರುವ ಬೆಣ್ಣೆತೋರ ಯೋಜನೆಗೆ ಮೇಲ್ಕಂಡ ಆದೇಶ ಬರುವುದಿಲ್ಲ. ಇದರಿಂದ ಸರ್ಕಾರ ಇಲ್ಲಿ ಮಲತಾಯಿ ಧೋರಣೆ ತೋರಿಸಿದಂತಾಗಿದೆ. ಇನನು 3Ë4 ತಿಂಗಳಲ್ಲಿ ಪರಿಹಾರ ಧನ ಕೊಡುವವರಿದ್ದಾರೆ. ಅದ್ದರಿಂದ ಈ ಯೋಜನೆಗೂ ಸರ್ಕಾರದಿಂದ ಡಿಪ್ರಿಸಿಯೇಷನ್‌ಸ ಬಗ್ಗೆ ಆದೇಶ ಹೊರಡಿಸಿ ಇಲ್ಲಿನ ರೈತರಿಗೆ ಅನುಕಬಲ ಮಾಡಿಕೊಡಬೇಕೆಂದು ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ. ನಮ್ಮ ಬಾಗದವರು ಶ್ರೀಮಾನ್ ಧರ್ಮಸಿಂಗ್ ಅವರು ಕುಳಿತುಕೊಂಡಿದ್ದಾರೆ ಅವರು ಅದರ ಬಗ್ಗೆ ನನಗೆ ಹೇಳಿದರೂ ಸಾಕು.

ಶ್ರೀ ಧರ್ಮಸಿಂಗ್ : ಈಗ ಅವರು ಇರಿಗೇಷನ್ ಪ್ರಾಜೆಕ್ಟ ಬಗ್ಗೆ ಹೇಳಿದ್ದಾರೆ ಈಗಾಗಲೇ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳತ್ತ್ಯಾ ಇದೇ.

ಕಿದ್ವಾಯಿ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಪರೀಕ್ಷೆ ಮಾಡದ ಬ್ಲಡ್ ಟ್ರಾನ್ಸ್‌ಫ್ಯೂಷನ್ ಮಾಡುತ್ತಿರುವುದು

ಶ್ರೀ ಆರ್. ವಿ. ದೇಶಪಾಂಡೆ : ಮೆಡಮ್. ಬೆಂಗಳೂರು ನಗರದ 2 ಆಸ್ಪತ್ರೆಗಳಲ್ಲಿ ಕಿದ್ವಾಯ್ ಮೆಮೋರಿಯಲ್ ಇನ್ಸ್ಟಿಟ್ಯೂಟ್ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಇವತ್ತು ಪರೀಕ್ಷ ಮಾಡದ ಬ್ಲಡ್ ಟ್ರಾನ್ಸ್‌ಫ್ಯೂಷನ್ ಮಾಡುತ್ತಿದ್ದಾರೆ ಎಂದು ಟೈಮ್ಸ್ ಆಫ್ ಇಂಡಿಯಾದಲ್ಲಿ ವರದಿಯಾಗಿದೆ. ಉದಾಹರಣೆಯೂ ಬಂದಿದೆ. ಒಬ್ಬ ಸಿದ್ದಪ್ಪ ಕೆ. ಮತ್ತು ಶ್ರೀಮತಿ ರಾಮಕೃಷ್ಣಮ್ಮ ಇವರಿಗೆ ಬ್ಲಡ್ ಕೊಡುವಾಗ ಇಂಥ ಅನ ಟಿಸ್ಟೆಡ್-ಬ್ಲಡ್ ಕೊಟ್ಟು ಗಂಭೀರ ಸಮಸ್ಯೆ